ಇಂದು ದಿನಾಂಕಃ 30.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ವಿ ವಿ ಎಂ ವಕೀಲರಿಂದಃ

ನನ್ನ ತಂದೆಯವರು ತೀರಿಕೊಂಡು ಎಷ್ಟು ವರ್ಷ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಬಸವಂತಪ್ಪ ರವರು ತೀರಿಕೊಂಡು ಅಂದಾಜು 10 ವರ್ಷ ಆಗಿರಬಹುದು. ಮಾದೇವಪ್ಪ ಹಾಗೂ ಪರಮೇಶ್ವರಪ್ಪನವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು 1983 ರಲ್ಲಿ ವಿಭಾಗ ಮಾಡಿಕೊಂಡರು ಎಂದರೆ ಸರಿ. ಆ ಬಗ್ಗೆ ಡ-ನಂಬರು 1789 ಎಂದು ಮಂಜೂರಾಗಿರುತ್ತದೆ ಎಂದರೆ ಸರಿ. ಉತ್ತರಕ್ಕೆ ಸರ್ವೆನಂ.179 ರ ಉತ್ತರ ಭಾಗ ನನ್ನ ತಂದೆಯ ಪಾಲಿಗೆ ಬಂದಿದ್ದು ಅದರ ವಿಸ್ತೀರ್ಣ 2 ಎಕರೆ 30 ಗುಂಟೆ ಆಗಿರುತ್ತದೆ. ಸದರಿ ಆಸ್ತಿಯ ದಕ್ಷಿಣಕ್ಕೆ ಹೊಂದಿಕೊಂಡು 1ನೇ ಪ್ರತಿವಾದಿ ತಂದೆ ಗದಿಗೆಪ್ಪ ರವರಿಗೆ ಆಸ್ತಿ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿ 2 ಎಕರೆ 30 ಗುಂಟೆ ಎಂದರೆ ಸರಿ. ಅದಕ್ಕೆ ಹೊಂದಿ ದಕ್ಷಿಣಕ್ಕೆ 4 ರಿಂದ 6 ನೇ ಪ್ರತಿವಾದಿಯರ ತಂದೆ ಮಾದೇವಪ್ಪ ರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಹಸ್ತ ನಕ್ಷೆಯಲ್ಲಿ 3 ನೇ ಭಾಗ 4 ರಿಂದ 6 ರವರ ಆಸ್ತಿ ಎಂದು ತೋರಿಸಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಆಸ್ತಿಯವನ್ನು ಅವರಿಗೆ ನೀಡಿರುವುದಿಲ್ಲ ಆದರೆ ಅವರೇ ಸದರಿ ಆಸ್ತಿಯನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಭಾಗ 4 ರಿಂದ 6 ರವರಿಗೆ ಸೇರಿದ ಆಸ್ತಿ ಎಂದು ಹಸ್ತ ನಕ್ಷೆಯಲ್ಲಿ ತೋರಿಸಿರುತ್ತೇವೆ ಎಂದರೆ ಸರಿ.

2. 4 ನೇ ಹಿಸ್ಸೆಯ ದಕ್ಷಿಣ ಭಾಗಕ್ಕೆ 2 ಎಕರೆ 28 ಗುಂಟೆ ಆಸ್ತಿಯ ಸಾಮೂಹಿಕ ಆಸ್ತಿ ಹಾಗೂ ಪತ್ರೆಪ್ಪನ 1 ಎಕರೆ 20 ಗುಂಟೆ ಆಸ್ತಿ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸಾಕ್ಷಿಯು 4 ನೇ ಹಿಸ್ಸೆಯ ಆಸ್ತಿಯ ಪಶ್ಚಿಮ ದಿಕ್ಕಿಗೆ 2 ಎಕರೆ 28 ಗುಂಟೆ ಸಾಮೂಹಿಕ ಜಮೀನು ಇರುತ್ತದೆ ಎಂದು ನುಡಿದಿರುತ್ತಾರೆ. ನಾನು ಹೇಳುವಂತೆ ಸದರಿ ಜಮೀನು ಪಶ್ಚಿಮಕ್ಕೆ ಮಾತ್ರ ಬರದೇ ದಕ್ಷಿಣಕ್ಕೂ ಹಾಗೂ ಪಶ್ಚಿಮದ ಕಡೆಗೂ ಎರಡು ದಿಕ್ಕಿನಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ ಬೇರೆ ಜಮೀನು ಬರುತ್ತದೆ ಎಂದು ನುಡಿದಿರುತ್ತಾರೆ ನಂತರ ಸದರಿ ಜಮೀನುಗಳ ಮದ್ಯ ನಮ್ಮ ಸ್ವಂತದ ಕೆರೆ ಇರುತ್ತದೆ ಎಂದು ನುಡಿದಿರುತ್ತಾರೆ. 4 ನೇ ಹಿಸ್ಸೆಯ ಆಸ್ತಿಯ ಪೂರ್ವದ ಕಡೆಗೆ ದಕ್ಷಿಣ ಭಾಗಕ್ಕೆ ಪತ್ರೆಪ್ಪ ರವರ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಪೂರ್ವ ಕಡೆಗೆ ಇರುವ ಆಸ್ತಿ 3 ಎಕರೆ 30 ಗುಂಟೆ ಜಮೀನು ನಾಲ್ಕು ಜನಕ್ಕೆ ಸೇರಿ ಸಾಮೂಹಿಕ ಆಸ್ತಿ ಇರುತ್ತದೆ ಎಂದು ನುಡಿದಿರುತ್ತಾರೆ. ಆ ರೀತಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆ ರೀತಿ ಜಂಟಿ ಸಾಮೂಹಿಕ ಆಸ್ತಿ ಪತ್ರೆಪ್ಪ ರವರ ಆಸ್ತಿಯ ದಕ್ಷಿಣಕ್ಕೆ ಬರುತ್ತದೆ ಎಂದರೆ

ಸರಿಯಲ್ಲ. ಗದಿಗೆಪ್ಪ ಮತ್ತು ಸಾಮೂಹಿಕ ಆಸ್ತಿಯ ಪಶ್ಚಿಮಕ್ಕೆ ಮಾದೇವಪ್ಪ ರವರ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ಮಾದೇವಪ್ಪರವರ ಆಸ್ತಿಯ ಪಶ್ಚಿಮ ದಿಕ್ಕಿಗೆ ನಿಮ್ಮ ಆಸ್ತಿ ಬರುತ್ತದೆ ಎಂದರೆ ಸಾಕ್ಷಿಯು ಪರಮೇಶ್ವರಪ್ಪವರ ಆಸ್ತಿ ಬರುತ್ತದೆ ಎಂದು ನುಡಿದಿರುತ್ತಾರೆ. ಜಂಟಿ ಆಸ್ತಿ 2 ಎಕರೆ 28 ಗುಂಟೆ ಆಸ್ತಿಯ ಪಶ್ಚಿಮಕ್ಕೆ ನನ್ನ ತಂದೆಗೆ ಬಂದಂತಹ ಆಸ್ತಿ ಇರುತ್ತದೆ ಎಂದರೆ ಸರಿ. ನನ್ನ ತಂದೆಯು ಉತ್ತರ ಕಡೆಯಿಂದ ಹಿಡಿದು ಉತ್ತರದ 1ನೇ ಹಿಸ್ಸೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನಾನು ಕೂಡ ಉತ್ತರದ ಕಡೆಯಿಂದ ಉತ್ತರದ 1ನೇ ಆಸ್ತಿಗೆ ಬರುತ್ತಿದ್ದೆ ಎಂದರೆ ಸರಿಯಲ್ಲ.

4. ನನ್ನ ತಂದೆಗೆ ಬಂದಂತಹ ಆಸ್ತಿಯಲ್ಲಿ ರಸ್ತೆಯನ್ನು ನಾವೇ ತೋರಿಸಿರುತ್ತೇವೆ ಎಂದರೆ ಸರಿ. ಆ ರೀತಿ ನನ್ನ ತಂದೆಗೆ ಬಂದಂತಹ ಹಿಸ್ಸೆಯನ್ನು ನಾನು ಮತ್ತು ನನ್ನ ತಮ್ಮ ಹಂಚಿಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆ ರೀತಿ ಆ ಆಸ್ತಿಯಲ್ಲಿ ಉತ್ತರದ ಭಾಗ ನನ್ನ ತಮ್ಮನಿಗೆ ಹೋಗಿದ್ದು ದಕ್ಷಿಣದ ಭಾಗ ನನಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಈರಪ್ಪನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಮತ್ತು ನನ್ನ ತಮ್ಮನ ಆಸ್ತಿಗಳು ಈಗಲೂ ಜಂಟಿ ಖಾತೆಗಳಲ್ಲಿ ಇರುತ್ತವೆ ಎಂದು ನುಡಿದಿರುತ್ತಾರೆ. ಈರಪ್ಪನಿಗೆ ಆಗಿರುವ ಹಿಸ್ಸೆಯ ಆಸ್ತಿಯ ಉತ್ತರದ ಅಂಚಿನ ಮೂಲಕ ಹಿಡಿದು ಮುಂದೆ ದಕ್ಷಿಣಕ್ಕೆ ತಿರುಗಿ ನಂತರ 1ನೇ ಪ್ರತಿವಾದಿಯ ಆಸ್ತಿಗೆ ಬಂದು ಅಲ್ಲಿಂದ ಹಿಡಿದು ಸಾಮೂಹಿಕ ಆಸ್ತಿಯ ಉತ್ತರದ ಅಂಚಿನಿಂದ ನಮ್ಮ ಪಶ್ಚಿಮದ ಆಸ್ತಿಗೆ ಹೋಗುತ್ತೇವೆ ಎಂದರೆ ಸರಿಯಲ್ಲ. ನಮ್ಮ ಪಶ್ಚಿಮದ ಆಸ್ತಿಗಳು ಉತ್ತರ ದಿಕ್ಕಿನಲ್ಲಿರುವ ಆಸ್ತಿಗಳು ಅಂತರ ಕಡಿಮೆ ಇರುವ ಕಾರಣದಿಂದ ನಾವು ನಮ್ಮ ಆಸ್ತಿಯಲ್ಲಿಯೇ ಓಡಾಡಬಹುದು ಎಂದರೆ ಸರಿಯಲ್ಲ. ಈ ಸತ್ಯ ಹೊರಗೆ ಬರುತ್ತದೆ ಎಂದು ಹೇಳಿ ನಾನು ಈರಪ್ಪನನ್ನು ಪಕ್ಷಗಾರರನಾಗ್ನಿ ಮಾಡಿಲ್ಲ ಎಂದರೆ ಸರಿಯಲ್ಲ. ಈರಪ್ಪ ರವರು ತನ್ನ 1ನೇ ಆಸ್ತಿಗೆ ಕಾಲುವೆ ಪಕ್ಕದಲ್ಲಿರುವಂತಹ ದಾರಿಯಿಂದ ಒಂದು ಮರದ ಪೂಲ್ (ಸೀಡಿ) ಹಾಕಿಕೊಂಡು ಓಡಾಡುತ್ತಾರೆ. ಸದರಿ ಸೀಡಿಯು ಈರಪ್ಪನ ಆಸ್ತಿಯ ಉತ್ತರ ದಿಕ್ಕಿಗೆ ಬರುತ್ತದೆ. ಎಲ್ಲರೂ ಅವರವರ ಹೊಲಕ್ಕೆ ಅವರು ಆ ಸೀಡಿಗಳ ಮೂಲಕವೇ ಹೋಗಬೇಕು ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.  ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.